ಒಂದು ಸೊಸೈಟಿ ರಿಜಿಸ್ಟರ್ ಮಾಡಿಲ್ಲ ಮತ್ತು ಅಧಿಕಾರವೂ ಇಲ್ಲ. ನಮ್ಮ ಸ್ಟಾಟ್ಯುಟರಿ ರಿಜಿಸ್ಟ್ರಾರ್ ಮತ್ತು ಸಬ್ ಡಿವಿಜನ್‌ನಲ್ಲಿರುವ ರಿಜಿಸ್ಟ್ರಾರ್ ಮುಂದೆ ನಾವು ಸೊಸೈಟಿ ರಿಜಿಸ್ಟ್ರೇಷನ್‌ಗೆ ಹೋಗಬೇಕು. ಅವರಿಗೆ ಅಧಿಕಾರ ಇದೆ ಎಂದು ಉತ್ತರ ಕೊಟ್ಟರೆ ನಾವು ಎಲ್ಲಿಗೆ ಹೋಗೋಣ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಎಲ್ಲಿಗೂ ಹೋಗಬೇಕಾಗಿಲ್ಲ. ಇಲ್ಲೇ ಇದ್ದಿರೆ ಸಂತೋಷ. ಅವರಿಗೆ ಪವರ್ಸ್ ಇಲ್ಲವೆಂದು ತಾವು ಹೇಳುತ್ತಿದ್ದೀರಿ. ಅದಕ್ಕೆ ನಾನು ಹೇಳಿದೆ ಅದನ್ನು ನಾನು ಸಂಬಂಧಪಟ್ಟ ಅಧಿಕಾರಿಗೆ ಕರೆಯಿಸಿ, ಏಕೆ ಈ ರೀತಿ ಆಗಿದೆ ಅಥವಾ ಏನಾದರೂ ಕಾನೂನು ಅಡಚಣೆ ಇದ್ದರೆ, ಇದನ್ನು ಸರಿಪಡಿಸತಕ್ಕ ವ್ಯವಸ್ಥೆ ಮಾಡುತ್ತೇನೆ.

ವಿಶ್ವಬ್ಯಾಂಕಿನ ಸಹಾಯದಿಂದ ಗ್ರಾಮಾಂತರ ಕುಡಿಯುವ ನೀರಿನ ಯೋಜನೆ

330 (1758): ಶ್ರೀ ಡಿ. ಹಲಗೇಗೌಡ (ಪಾಂಡವಪುರ):–

ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ವಿಶ್ವಬ್ಯಾಂಕಿನ ಸಹಾಯದಿಂದ ಕೈಗೊಳ್ಳುವ ಮೊದಲ ಕಂತಿನ ಗ್ರಾಮಾಂತರ ಕುಡಿಯುವ ನೀರು ಸರಬರಾಜು ಮತ್ತು ಗ್ರಾಮ ಶುದ್ಧೀಕರಣ ಯೋಜನೆಯು ಯಾವಾಗ ಪ್ರಾರಂಭವಾಗುವುದು;

2. ಇಲ್ಲಿಯವರೆಗೆ ಆಗಿರುವ ಈ ಯೋಜನೆಯ ಕಾರ್ಯಗಳ ಪ್ರಗತಿ ಏನು;

3. ಕೆಲಸ ಪ್ರಗತಿಯಾಗದಿರಲು ಕಾರಣವೇನು ಹಾಗೂ ಎರಡನೇ ಹಂತದ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು;

4. ಅದನ್ನು ಇನ್ನೂ ಪ್ರಾರಂಭಿಸದಿರುವುದರಿಂದ ತೊಂದರೆಯಲ್ಲಿರುವ ಗ್ರಾಮಗಳಿಗೆ ಇನ್ನೂ ಹೆಚ್ಚಿನ ತೊಂದರೆಯಾಗುವುದಿಲ್ಲವೆ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು):–

1. 1993-94ರಲ್ಲಿ.

2. ಸುಮಾರು 1300 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. 225 ಹಳ್ಳಿಗಳ ಯೋಜನಾ ವರದಿಯನ್ನು ಸಿದ್ಧಪಡಿಸಲಾಗಿದೆ.

3. ವಿಶ್ವಬ್ಯಾಂಕ್‌ನಿಂದ ಸಾಲದ ನೆರವು 1993ರ ಜುಲೈ ತಿಂಗಳಿನಿಂದ ಪ್ರಾರಂಭವಾಗುವುದೆಂದು ನಿರೀಕ್ಷಿಸಲಾಗಿದೆ. ಆದ ಕಾರಣ ಯೋಜನೆಯ ಅನುಷ್ಠಾನದಲ್ಲಿ ವಿಳಂಬವಿರುವುದಿಲ್ಲ. ಯೋಜನೆಯ ಎರಡನೇ ಹಂತವನ್ನು 1995-96ರಲ್ಲಿ ತೆಗೆದುಕೊಳ್ಳಲು ಯೋಜಿಸಲಾಗಿದೆ.

4. ಇಲ್ಲ.

ಶ್ರೀ ಡಿ. ಹಲಗೇಗೌಡ:– ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವುದು ಪ್ರಶ್ನೆ ಕನ್ನಡದಲ್ಲಿ ಅವರು ಉತ್ತರ ಕೊಟ್ಟಿರುವುದು ಇಂಗ್ಲೀಷ್‌ನಲ್ಲಿ. ನನಗೆ ಒಂದೊಂದು ಸಾರಿ ಇಂಗ್ಲೀಷ್ ಅರ್ಥವಾಗುವುದಿಲ್ಲ. ಕನ್ನಡದಲ್ಲಿ ಮಾಡಿದರೆ ಚೆನ್ನಾಗಿತ್ತು. ಅಧ್ಯಕ್ಷರೇ, ತಾವು ಈ ವಿಶ್ವಬ್ಯಾಂಕ್ ಯೋಜನೆಯನ್ವಯ ಗ್ರಾಮಗಳಲ್ಲಿ ಕುಡಿಯುವ ನೀರು ಮತ್ತು ಗ್ರಾಮ ಅಭಿವೃದ್ಧಿ ಕೆಲಸ ತೆಗೆದುಕೊಳ್ಳುವುದಕ್ಕೆ 87ನೇ ಇಸವಿಯಲ್ಲಿ ಮೊದಲನೇ ಹಂತದಲ್ಲಿ ಕೆಲವು ಹಳ್ಳಿಗಳನ್ನು ಆರಿಸಿಕೊಂಡಿದ್ದೀರಿ. ಹಿಂದೆ ಸನ್ಮಾನ್ಯ ಬಸವಲಿಂಗಪ್ಪನವರು ಈ ಇಲಾಖೆಯ ಸಚಿವರಾಗಿದ್ದಾಗ ಈ ಸದನದಲ್ಲಿ ಒಂದು ಹೇಳಿಕೆಯನ್ನು ನೀಡಿದ್ದರು. ಈ ವಿಶ್ವಬ್ಯಾಂಕ್ ಸಹಾಯದಿಂದ ಕೈಗೊಳ್ಳುವ ಮೊದಲ ಕಂತಿನ ಗ್ರಾಮ ಅಭಿವೃದ್ಧಿ

ಕುಡಿಯುವ ನೀರು ಸರಬರಾಜು ಮತ್ತು ಗ್ರಾಮ ಶುದ್ಧೀಕರಣ ಯೋಜನೆ ಯಾವಾಗ ಪ್ರಾರಂಭವಾಗುತ್ತದೆ ಎಂದಾಗ ಅವರು 92ರಲ್ಲಿ ಮುಗಿದು ಎರಡನೇ ಹಂತ 93ರಲ್ಲಿ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದರು. ಆದರೆ ಇಲ್ಲಿ ತಾವು ಉತ್ತರ ಕೊಟ್ಟಿರತಕ್ಕಂಥದ್ದು 93–94ರಲ್ಲಿ ಮೊದಲನೇ ಹಂತ ಪ್ರಾರಂಭ ಆಗುತ್ತದೆಂದು ಹೇಳಿದ್ದಾರೆ. ಯಾವುದು ನಿಜ. ಹಿಂದೆ ಸಚಿವರು ಹೇಳಿದ್ದು ಒಂದು; ಈಗ ಒಂದು ರೀತಿ ಉತ್ತರ ಕೊಟ್ಟಿದ್ದಾರೆ. ನಾವು ಇದರಲ್ಲಿ ಯಾವುದು ಅಧಿಕೃತವಾದುದ್ದು ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಈ ಯೋಜನೆಗಳಿಗೆಲ್ಲಾ ದೊಡ್ಡ ದೊಡ್ಡ ಗ್ರಾಮಗಳನ್ನು ಒಂದೂವರೆ ಸಾವಿರಕ್ಕಿಂತ ಅಥವಾ 2–3 ಸಾವಿರಕ್ಕಿಂತ ಜನಸಂಖ್ಯೆ ಕಡಿಮೆ ಇರತಕ್ಕಂತ ಹಳ್ಳಿಗಳನ್ನು ಆರಿಸಿಕೊಂಡಿದ್ದೀರಿ. ಆ ಹಳ್ಳಿಗಳಲ್ಲಿ ವಿಶ್ವಬ್ಯಾಂಕ್ ನೆರವಿನಿಂದ ಪ್ರಾರಂಭವಾಗಿಲ್ಲ, ನಾವು ಜಿಲ್ಲಾಪರಿಷತ್‌ನಲ್ಲೂ ಕೂಡ ಅವರಿಗೆ ಸವಲತ್ತುಗಳನ್ನು ಒದಗಿಸಿಕೊಟ್ಟಿಲ್ಲ. ಇದರಿಂದ ತೊಂದರೆ ಆಗಿಲ್ಲವೇ ಎಂದು ಕೇಳಿದ್ದಕ್ಕೆ ಇಲ್ಲವೆಂದು ಹೇಳುತ್ತೀರಿ. ಇದನ್ನು ಹೇಗೆ ತಾವು ಸಮರ್ಥಿಸಿಕೊಳ್ಳುತ್ತೀರಿ ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೇ, ಹಿಂದೆ ಬಸವಲಿಂಗಪ್ಪನವರು ಹೇಳಿಕೆ ಕೊಟ್ಟಿರುವುದೂ ನಿಜ, ಈಗ ಕೊಟ್ಟಿರುವುದೂ ನಿಜ. ಹೇಗೆಂದರೆ 92–93ನೇ ಸಾಲಿನಲ್ಲಿ ಪ್ರಾರಂಭವಾಗಬೇಕು ಎನ್ನುವ ಯೋಜನೆ ಇತ್ತು. ಆದರೆ ವರ್ಲ್ಡ್‌ಬ್ಯಾಂಕ್‌ನಲ್ಲಿ ವ್ಯವಹಾರ ಮಾಡುವಾಗ ಕಾಗದ ಪತ್ರಗಳಲ್ಲಿ ತಡವಾಯಿತು. ಅಗ್ರಿಮೆಂಟ್ ಆಗಿದೆ ರುಜು ಆಗಿಲ್ಲ. ನಮ್ಮ ಚೀಫ್ ಇಂಜಿನಿಯರ್ ಹೋಗಿದ್ದಾರೆ. ಈಗ ಒಂದು ವಾರದಲ್ಲಿ ರುಜು ಬೀಳುವ ಸಂಭವ ಇದೆ. ಈಗಾಗಲೇ ಯೋಜನೆಯಡಿಯಲ್ಲಿ 1300 ಕೊಳವೆ ಬಾವಿಗಳನ್ನು ತೆಗೆಯಲಾಗಿದೆ anticipating sanction. ಇದರಲ್ಲಿ ಒಟ್ಟು ಒಂದು ಸಾವಿರ ಹಳ್ಳಿಗಳಲ್ಲಿ 10 ಜಿಲ್ಲೆಗಳಲ್ಲಿ ಅದನ್ನು ಐಡೆಂಟಿಫೈ ಮಾಡಿ ಯಾವುದು ಕೆಲಸ ಮಾಡಬೇಕೆಂದು ತೀರ್ಮಾನ ಆಗಿ 250 ಗ್ರಾಮಗಳಲ್ಲಿ ಈಗಾಗಲೇ ಕೆಲಸ ಪ್ರಾರಂಭವಾಗಿದೆ. ಇನ್ನೂ 750 ಗ್ರಾಮಗಳಲ್ಲಿ 94–95ರಲ್ಲಿ ಆ ಕೆಲಸ ಪ್ರಾರಂಭವಾಗುತ್ತದೆ. ಆದ್ದರಿಂದ ವರ್ಲ್ಡ್‌ಬ್ಯಾಂಕ್ ಸಹಾಯ ಸೆಕೆಂಡ್ ವೀಕ್ ಆಫ್ ಮಾರ್ಚ್‌ನಲ್ಲಿ ಸಾಧ್ಯವಾಗುತ್ತದೆ. ಅದರ ಒಪ್ಪಂದ ರುಜು ಆದ ಮೇಲೆ 93-94, 94–95ರಲ್ಲಿ ಯೋಜನೆ ಪೂರ್ಣವಾಗುತ್ತದೆ.

ಶ್ರೀ ಡಿ. ಹಲಗೇಗೌಡ:– ಈ ರೀತಿ ವಿಶ್ವಬ್ಯಾಂಕ್ ಯೋಜನೆಗಳು ಅದರಲ್ಲೂ ಕುಡಿಯುವ ನೀರಿನ, ಸಾಗರೀಕ ಸೌಲಭ್ಯಗಳ ವಿಚಾರದಲ್ಲಿ ಯೋಜನೆಗಳು ನಿಧಾನವಾಗಿ ಪ್ರಾರಂಭವಾಗುತ್ತಿದೆ. ಕೆಲವು ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ವಿಶ್ವಬ್ಯಾಂಕಿನ ಎಲ್ಲಾ ಯೋಜನೆಗಳು ಕೂಡ ಗಗನಕುಸುಮ, ಆಕಾಶಗಂಗೆ ಎಂದು ಹೇಳುತ್ತಾರಲ್ಲಾ ಹಾಗೆ ಅಂದುಕೊಳ್ಳಬಹುದೇ ? ಇದನ್ನು ನಿಜವಾಗಿ ಪ್ರಾರಂಭ ಮಾಡುತ್ತೀರಾ ? ಮೊದಲನೇ ಹಂತವನ್ನು ನೀವು ಪೂರ್ಣಗೊಳಿಸುತ್ತೀರಾ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಖಂಡಿತವಾಗಿ ಆ ಕೆಲಸಗಳನ್ನು ಯೋಜನೆ ಪ್ರಕಾರ 93–94 ಮತ್ತು 94-95ರಲ್ಲಿ ಒಂದು ಸಾವಿರ ಗ್ರಾಮಗಳಲ್ಲಿ ಮುಗಿಸುವ ಯೋಜನೆ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಶ್ರೀ ರಾಮಸ್ವಾಮಿಯವರು ಹೇಳಿದ ಹಾಗೆ ಒಂದು ಸಾವಿರ ಹಳ್ಳಿಗಳನ್ನು ತೆಗೆದುಕೊಂಡಿರುವುದು ನಿಜ. ಆದರೆ ಏನಾಗಿದೆ ಎಂದರೆ ನಮ್ಮ ಜಿಲ್ಲೆಯಲ್ಲೂ ಕೂಡ 100 ಗ್ರಾಮಗಳನ್ನು ಸೆಲೆಕ್ಟ್ ಮಾಡಿದ್ದಾರೆ. 100 ಕಡೆಗಳಲ್ಲಿ ಸ್ಟೇಟ್ ಸೆಕ್ಟರ್‌ನಲ್ಲಿ ಬೋರ್‌ವೆಲ್‌ಗಳನ್ನು ಹಾಕಿ ಎಕ್ಸ್‌ಪೆಂಡಿಚರ್ ಇನ್‌ಕರ್ ಆಗಿದೆ. ಅವೆಲ್ಲಾ ಒಂದು ಸಾವಿರಕ್ಕಿಂತ ಜನಸಂಖ್ಯೆ ಜಾಸ್ತಿ ಇರತಕ್ಕದ್ದು, ಬೋರವೆಲ್ ಹಾಕಿ ಎರಡು ವರ್ಷ ಆಯಿತು. ಸ್ಟೇಟ್ ಸೆಕ್ಟರ್‌ನಲ್ಲಿ ಅಥವಾ ಸೆಂಟರ್ ಸೆಕ್ಟರ್‌ನಲ್ಲಿ ವಾಟರ್ ಸಪ್ಲೈ ಸ್ಕೀಮ್‌ಗಳನ್ನು ತೆಗೆದುಕೊಳ್ಳಲು ಆಗುವುದಿಲ್ಲ. ನನ್ನ ಪ್ರಶ್ನೆ ಏನೆಂದರೆ ಎಲ್ಲೆಲ್ಲಿ

ಬೋರವೆಲ್‌ಗಳನ್ನು ಹಾಕಿದ್ದೀರಿ, ಅಲ್ಲಲ್ಲಿ ಈ ವರ್ಷ 93-94ರಲ್ಲಿ ವರ್ಲ್ಡ್‌ಬ್ಯಾಂಕಿನವರು ಒಂದು ಪಕ್ಷ ಒಪ್ಪದೇ ಇದ್ದರೆ ಸ್ಟೇಟ್ ಸೆಕ್ಟರ್‌ನಲ್ಲಿ ಆ ಸ್ಕೀಮ್‌ಗಳನ್ನು ಕಂಪ್ಲೀಟ್ ಮಾಡಲು ಸಾಧ್ಯವೇ ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ವರ್ಲ್ಡ್‌ಬ್ಯಾಂಕಿನವರು ಒಪ್ಪದೇ ಇರಲು ಸಾಧ್ಯವೇ ಇಲ್ಲ. ಎಲ್ಲಾ ವ್ಯವಹಾರಗಳು ಪೂರ್ತಿಯಾಗಿವೆ. ಎಲ್ಲಾ ಒಪ್ಪಂದಗಳೂ ಪೂರ್ತಿಯಾಗಿದೆ. ರುಜು ಮಾತ್ರ ಬೇಕಾಗಿದೆ. ಆ ಆಧಾರದ ಮೇಲೆ ನಾವು ಅಂಟಿಸಿಪೇಟಿಂಗ್ ಸ್ಕ್ಯಾಂಕ್ಷನ್ ಕೆಲಸಗಳನ್ನು ಶುರು ಮಾಡಿದ್ದೇವೆ. ಇದರಲ್ಲಿ ಯಾವುದೇ ಅನುಮಾನ ಬೇಕಾಗಿಲ್ಲ. ಅವರ ಸ್ಕೀಮ್‌ನಲ್ಲೇ ಈ ಕೆಲಸಗಳನ್ನು ಮುಂದುವರಿಸಲಾಗುವುದು.

ಪಟೇಲರು ಹಾಗೂ ಶ್ಯಾನುಭೋಗರುಗಳಿಗೆ ಅಡ್‌ಹಾಕ್ ನಿವೃತ್ತಿ ವೇತನ.

332 (21): ಶ್ರೀ ಎ. ವಿ. ಉಮಾಪತಿ (ಹೊಳಲ್ಕೆರೆ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕ ರಾಜ್ಯದ ಆನುವಂಶಿಕ ಹಕ್ಕು ರದ್ದತಿ ಕಾಯ್ದೆಯಂತೆ ಹಕ್ಕು ಕಳೆದುಕೊಂಡ ಪಟೇಲ್-ಶ್ಯಾನುಭೋಗರುಗಳಿಗೆ ಮಾಹೆಯಾನ 100.00 ರೂ.ಗಳಂತೆ ಈವರೆಗೆ ಅನುಕಂಪ ಭತ್ಯೆ ನೀಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಈಗ ರಾಜ್ಯದ ಮಾಜಿ ಶ್ಯಾನುಭೋಗರುಗಳಿಗೆ ಮಾತ್ರ ತಿಂಗಳಿಗೆ 500.00 ರೂ. ಅಡ್‌ಹಾಕ್ ಪೆನ್ಷನ್ ನೀಡುತ್ತಿದ್ದು ಪಟೇಲರುಗಳಿಗೆ ಅಡ್‌ಹಾಕ್ ಪೆನ್ಷನ್ ನೀಡದೆ ತಾರತಮ್ಯ ಮಾಡಿರುವುದಕ್ಕೆ ಕಾರಣವೇನು;

ಇ. ಈಗಲಾದರೂ ಮಾಜಿ ಪಟೇಲರುಗಳಿಗೆ ಶ್ಯಾನುಭೋಗರುಗಳಿಗೆ ನೀಡುತ್ತಿರುವಂತೆ ಮಾಹೆಯಾನ ಅಡ್‌ಹಾಕ್ ಪೆನ್ಷನ್ ನೀಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಮಂತ್ರಿಗಳು):–

ಅ. ಹೌದು.,

ಆ. ಈ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇ. ಪರಿಶೀಲಿಸಲಾಗುತ್ತಿದೆ.

ಶ್ರೀ ಎ. ವಿ. ಉಮಾಪತಿ:– ಕರ್ನಾಟಕ ರಾಜ್ಯದ ಆನುವಂಶಿಕ ಹಕ್ಕು ರದ್ದತಿ ಕಾಯ್ದೆಯಂತೆ ಹಕ್ಕು ಕಳೆದುಕೊಂಡ ಪಟೇಲ್ ಶ್ಯಾನುಭೋಗರುಗಳಿಗೆ ಮಾಹೆಯಾನ 100.00 ರೂ.ಗಳಂತೆ ಈವರೆಗೆ ಅನುಕಂಪ ಭತ್ಯೆ ನೀಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದು ಕೇಳಿದ ಪ್ರಶ್ನೆಗೆ ಹೌದು ಎಂದು ಉತ್ತರ ಕೊಟ್ಟಿದ್ದಾರೆ. ಈಗ ಶ್ಯಾನುಭೋಗರುಗಳಿಗೆ 500.00 ರೂ.ಗಳನ್ನು ಅಡ್‌ಹಾಕ್ ಪೆನ್ಷನ್ ಎಂದು ನೀಡುತ್ತಿದ್ದಾರೆ. ಆದರೆ ಪಟೇಲರಿಗೆ ಆ ರೀತಿ ನೀಡುತ್ತಿಲ್ಲ. ಈ ರೀತಿ ಪಟೇಲರಿಗೆ ನೀಡದೇ ತಾರತಮ್ಯ ಮಾಡಲು ಕಾರಣ ಏನು ಎಂದು ಕೇಳಿರುವುದಕ್ಕೆ ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದೀರಿ. ಶ್ಯಾನುಭೋಗರು ಮತ್ತು ಪಟೇಲರು ಒಂದೇ ಸಮಯದಲ್ಲಿ ಕೆಲಸ ಮಾಡತಕ್ಕಂಥ ಒಂದು ಕಾಲ, ಆದರೆ ಶ್ಯಾನುಭೋಗರುಗಳಿಗೆ ಹಾಗೂ ಪಟೇಲರುಗಳಿಗೂ ಹಿಂದೆ 100 ರೂ. ಕೊಡುತ್ತಿದ್ದರು. ಆದರೆ ಈಗ ಏಕ್‌ದಮ್ ಶ್ಯಾನುಭೋಗರುಗಳಿಗೆ 100 ರೂ. ಇದ್ದದ್ದನ್ನು 500.00 ರೂ. ಮಾಡಿದರು. ಆದರೆ ಪಟೇಲರುಗಳಿಗೆ ಆ ರೀತಿ ಕೊಡುತ್ತಿಲ್ಲ. ಈ ರೀತಿ ಶ್ಯಾನುಭೋಗರುಗಳಿಗೆ ಕೊಡಬೇಕಾದರೆ